

# ಶಿಕ್ಷಣದ ‘ಪ್ರಕಾಶ’

■ ಪ್ರವೀಣ ಕುಲಕರ್ಣಿ

ನಮ್ಮ ಗುರು ಪರಂಪರೆಯ ಘನತೆ ಇರುವುದೇ ತ್ಯಾಗದಲ್ಲಿ ಮತ್ತು ತಾನು ಪಡೆದ ವಿದ್ಯಾಸಂಪತ್ತನ್ನು ಶಿಷ್ಯಂದಿರಿಗೆ ಧಾರೆ ಎರೆಯುವುದರಲ್ಲಿ. ಸಮಾಜದಿಂದ ಪಡೆದದ್ದನ್ನು ಸಾಲದ ರೂಪದಲ್ಲಿ ಕಂಡು, ಅದೇ ಸಮಾಜಕ್ಕೆ ಪಡೆದಿದ್ದೆಲ್ಲವನ್ನೂ ತಿರುಗಿ ಕೊಡುಗೆಯಾಗಿ ಕೊಡುವ ತನಕ ಇಂತಹ ‘ತ್ಯಾಗಜೀವಿ’ಗಳಿಗೆ ದಣಿವು, ವಿಶ್ರಾಂತಿ ಯಾವುದೂ ಇಲ್ಲ. ಬೆಂಗಳೂರಿನ ಎನ್. ಸತ್ಯಪ್ರಕಾಶ್ ಅಂತಹ ಗುರು ಪರಂಪರೆಗೆ ಸೇರಿದ ಶಿಕ್ಷಕರಲ್ಲಿ ಒಬ್ಬರು.

ಬೆಂಗಳೂರಿನ ರಾಜಾಜಿನಗರದ ವಿದ್ಯಾವರ್ಧಕ ಶಾಲೆಯಲ್ಲಿ ದಶಕಗಳ ಕಾಲ ಬೋಧನೆ ಮಾಡಿದ ಅವರು, ನಿವೃತ್ತಿ ಬಳಿಕ ಕೈಕಟ್ಟಿ ಕೂರಲಿಲ್ಲ. ಬದಲಿಗೆ ಇನ್ನಷ್ಟು ಕ್ರಿಯಾಶೀಲರಾಗಿ ಶಿಕ್ಷಣದ ಸೇವೆಯಲ್ಲಿ ತೊಡಗಿಕೊಂಡರು. ಬಾಲಮೋಹನ ಮಂದಿರವನ್ನು ಕಟ್ಟಿದ ಅವರು, ಪ್ರವೇಶ ಶುಲ್ಕ ಭರಿಸಲಾಗದೆ ಯಾವ ಮಗುವೂ ಶಿಕ್ಷಣದಿಂದ ವಂಚಿತರಾಗಬಾರದು ಎಂದು ಕಳಕಳಿ ಮೆರೆದರು. ಬಾಲಮಂದಿರದಲ್ಲಿ ಸದ್ಯ 172 ಮಕ್ಕಳು ಓದುತ್ತಿರುವರು. ಅರ್ಧದಷ್ಟು ವಿದ್ಯಾರ್ಥಿಗಳು ಶುಲ್ಕ ತುಂಬಿದರೆ, ಇನ್ನು ಅರ್ಧದಷ್ಟು ಮಕ್ಕಳಿಗೆ ಸಂಪೂರ್ಣವಾಗಿ ಶುಲ್ಕ ತುಂಬಲು ಆಗಿಲ್ಲ. ಕೆಲವರಿಗೆ ಒಂದು ರೂಪಾಯಿಯನ್ನೂ ಕೊಡುವುದು ಸಾಧ್ಯವಾಗಿಲ್ಲ. ಎಲ್ಲರನ್ನೂ ಈ ಶಾಲೆ ಅಷ್ಟೇ ಪ್ರೀತಿಯಿಂದ ಬರಮಾಡಿಕೊಳ್ಳುತ್ತದೆ. ಕಾಳಜಿಯಿಂದ ವಿದ್ಯೆಯನ್ನು ಧಾರೆ ಎರೆಯುತ್ತದೆ. ಶಾಲೆಯ ಈ ಔದಾರ್ಯದ ಹಿಂದೆ ಸತ್ಯಪ್ರಕಾಶ್ ಅವರ ತ್ಯಾಗದ ಪ್ರಭಾವಳಿ ಇದೆ.

ಸತ್ಯಪ್ರಕಾಶ್ ಅವರು ಸಮಾನಮನಸ್ಕರ ಜತೆಗೂಡಿ ಜ್ಞಾನದೀಪಿಕ ಶೈಕ್ಷಣಿಕ ದತ್ತಿ ಸ್ಥಾಪಿಸಿದ್ದಾರೆ. ಈ ಸಂಸ್ಥೆಯ ಮೂಲಕ ನಿರಂತರವಾಗಿ ಶೈಕ್ಷಣಿಕ ಸೇವಾ ಕೈಂಕರ್ಯ ನಡೆಸುತ್ತಿದ್ದಾರೆ. ಅವರಿಗೆ ಇಂತಹ ಯೋಚನೆ ಬಂದಿದ್ದಾದರೂ ಹೇಗೆ? ಕುತೂಹಲ ತಣಿಸಿಕೊಳ್ಳಲು ಈ ಪ್ರಶ್ನೆಯನ್ನು ಅವರ ಮುಂದಿಟ್ಟಾಗ ಕೊಟ್ಟ ಉತ್ತರವು ಮನುಷ್ಯತ್ವದ ಜೀವಸೆಲೆಗಳಿಗೆ ಕನ್ನಡಿ ಹಿಡಿಯುತ್ತಿತ್ತು. ಬಾಲ್ಯದಲ್ಲಿ ಸತ್ಯಪ್ರಕಾಶ್ ಅವರು ಬಡತನದಲ್ಲಿ ಬೆಳೆದವರು. ಶಾಲೆ ಕಲಿಯಲು ಹತ್ತಿರದ ಪಟ್ಟಣ ಸೇರಿಕೊಂಡಾಗ ವಾರಾನ್ನದ ಮೂಲಕ ತುತ್ತಿನ ಚೀಲವನ್ನು ತುಂಬಿಸಿಕೊಂಡವರು. ನಿತ್ಯ ಒಬ್ಬೊಬ್ಬರ ಮನೆಗೆ ಹೋಗಿ ಊಟ ಮಾಡುವ ಹೊಟ್ಟೆ ಹಸಿವು ನೀಗಿಸಿಕೊಳ್ಳುವುದಕ್ಕಿಂತಲೂ ಅವರಲ್ಲಿ ವಿದ್ಯೆಯನ್ನು ತುಂಬಿಸಿಕೊಳ್ಳುವ ಹಸಿವು ಹೆಚ್ಚಾಗಿತ್ತು. ಶಾಲಾ ದಿನಗಳಲ್ಲಿ ತಮಗೆ ಊಟ ಬಡಿಸಿ, ಸಲುಹಿದವರೆಲ್ಲ ತಮ್ಮ ಪಾಲಿಗೆ ಪ್ರಾತಃಸ್ಮರಣೀಯರು ಎಂದು ಅವರು ಹೇಳುತ್ತಾರೆ. ವರ್ಷಕ್ಕೊಮ್ಮೆ ಅವರ ಮನೆಗೆ ಹೋಗಿ ಕೃತಜ್ಞತೆ ಅರ್ಪಿಸಿ ಬರುತ್ತಾರೆ.

‘ಶಾಲೆಗೆ ಹೋಗುವಾಗ ವಾರಾನ್ನದ ಬೆಂಬಲ ಇಲ್ಲದಿದ್ದರೆ ನಾನು ಓದುವುದು ಸಾಧ್ಯವೇ ಆಗುತ್ತಿರಲಿಲ್ಲ. ಇಂದಿನ ಸ್ಥಿತಿಗೂ ಬರುತ್ತಿರಲಿಲ್ಲ. ಸಮಾಜದಿಂದ ಹೀಗೆ ಪಡೆದಿದ್ದನ್ನು ಪುನಃ ಕೊಡಬೇಕಾದುದು ನನ್ನ ಕರ್ತವ್ಯವಲ್ಲವೇ’ ಎಂದು ಅವರು ಕೇಳುತ್ತಾರೆ. ಸತ್ಯಪ್ರಕಾಶ್ ಅವರು ನಿವೃತ್ತಿ ವೇತನದಲ್ಲಿ ಎತ್ತಿಟ್ಟ ಪಾಲು, ವಿವಿಧ ವಿದ್ಯಾಸಂಸ್ಥೆಗಳಿಗೆ ಬೋಧನೆ ಮಾಡಲು ಹೋದಾಗ ಸಿಗುವ ಗೌರವಸಂಭಾವನೆ ಎಲ್ಲವನ್ನೂ ಒಟ್ಟುಗೂಡಿಸಿ ಪ್ರತಿವರ್ಷ ₹ 8 ಲಕ್ಷದಷ್ಟು ಮೊತ್ತವನ್ನು ಶಿಕ್ಷಣಕ್ಕಾಗಿ ವಿನಿಯೋಗ ಮಾಡುತ್ತಾರೆ. ‘ಕೊಟ್ಟಿದ್ದು ತನಗೆ...’ ಎಂದು ಸರ್ವಜ್ಞನ ವಚನವನ್ನು ಉದ್ಧರಿಸುವ ಅವರು, ‘ಕೊಡುವ ಆನಂದ ಕೊಟ್ಟವರಿಗಷ್ಟೇ ಗೊತ್ತು’ ಎಂದು ಖುಷಿಯಿಂದ ಹೇಳುತ್ತಾರೆ.

ಒಮ್ಮೆ ಕಾಲೇಜು ಸೇರಲು ಮೈಸೂರಿಗೆ ಹೋಗಿ, ವಾಸ್ತವ್ಯಕ್ಕೆ ಯಾರ ಮನೆಯಲ್ಲೂ ವ್ಯವಸ್ಥೆಯಾಗದೆ ಸತ್ಯಪ್ರಕಾಶ್ ಅವರು, ತಮ್ಮ ತಂದೆಯವರೊಡನೆ ಕೊಣನೂರಿಗೆ ವಾಪಸ್ ಆಗುತ್ತಿದ್ದರಂತೆ. ಬಸ್ಸಿನಲ್ಲಿ ಇವರ ಪಕ್ಕದ ಸೀಟಿನಲ್ಲಿ ಕುಳಿತವರು ಗೊರೂರು ರಾಮಸ್ವಾಮಿ ಅಯ್ಯಂಗಾರ್! ಕೈಯಲ್ಲಿ ಮಯೂರ ಮಾಸಿಕವನ್ನು ಹಿಡಿದಿದ್ದ ಅವರು ಘನಗಂಭೀರವಾಗಿ ಓದುತ್ತಾ ಕುಳಿತಿದ್ದರಂತೆ. ಬಸ್ಸು ಕೊಣನೂರು ತಲುಪಿದಾಗ ಗೊರೂರರು ಛತ್ರಿ ಮರೆತು ಹಾಗೇ ಇಳಿದರಂತೆ. ಸತ್ಯಪ್ರಕಾಶ್ ಅವರು ‘ತಾತಯ್ಯ ಛತ್ರಿ’ ಎಂದು ಹಿಂದೆಯೇ ಓಡುತ್ತಾ ಹೋದರಂತೆ. ಛತ್ರಿ ಪಡೆದುಕೊಂಡ ಗೊರೂರರು, ಏನು ಓದುತ್ತಿರುವೆಯಪ್ಪ ಎಂದು ವಿಚಾರಿಸಿದಾಗ, ಸತ್ಯಪ್ರಕಾಶ್ ಅವರು ಕಾಲೇಜು ಸೇರಲಾಗದೆ ವಾಪಸ್ ಬಂದ ಕಥೆ ಹೇಳಿದರಂತೆ. ಅಷ್ಟರಲ್ಲಿ ಗೊರೂರರು ಈ ಹುಡುಗನೊಂದಿಗೆ, ತಮ್ಮ ಸಹೋದರ ನರಸಿಂಹಾಚಾರ್ ಅವರ ಮನೆ ಮುಂದೆ ಬಂದಿದ್ದರಂತೆ. ‘ನರಸಿಂಹಯ್ಯ, ಬಾ ಇಲ್ಲಿ. ಈ ಹುಡುಗ ಇನ್ನು ಮುಂದೆ ನಿಮ್ಮ ಮನೆಯಲ್ಲಿ ಇರುತ್ತಾನೆ. ಕಾಲೇಜು ಮುಗಿಯುವವರೆಗೆ ಆಶ್ರಯ ನೀಡು’ ಎಂದು ಗೊರೂರರು ಮನೆಯ ಹೊರಗಿನಿಂದಲೇ ಆದೇಶಿಸಿದರಂತೆ. ನರಸಿಂಹಾಚಾರ್ ಅವರು ಮರುಮಾತಿಲ್ಲದೆ ಒಪ್ಪಿದರಂತೆ. ಕಾಲೇಜು ಮುಗಿಯುವವರೆಗೂ ಸತ್ಯಪ್ರಕಾಶ್ ಅವರು ನರಸಿಂಹಾಚಾರ್ ಅವರ ಮನೆಯಲ್ಲೇ ಇದ್ದರು. ಇದ್ದು ಓದಿದರು.

ಈ ಘಟನೆಯನ್ನು ಭಾವುಕರಾಗಿ ನೆನಪು ಮಾಡಿಕೊಳ್ಳುವ ಸತ್ಯಪ್ರಕಾಶ್ ಅವರು, ‘ಇಂತಹ ದೊಡ್ಡ ಗುರು ಪರಂಪರೆಯಿಂದ ನಾನು ಪಡೆದ ಸಾಲ ದೊಡ್ಡದಿದೆ. ನಾನು ಅದನ್ನು ತೀರಿಸಬೇಕಲ್ಲವೇ’ ಎಂದು ವಿನೀತರಾಗಿ ಪ್ರಶ್ನಿಸುತ್ತಾರೆ. ತಾಲ್ಲೂಕು ಮಟ್ಟದ ಪ್ರಶಸ್ತಿಯಿಂದ ರಾಷ್ಟ್ರಮಟ್ಟದವರೆಗೆ ಎಲ್ಲ ಪ್ರಶಸ್ತಿ ಪುರಸ್ಕಾರಗಳು ಅವರಿಗೆ ಸಂದಿವೆ. ಒಂದೊಂದು ಪ್ರಶಸ್ತಿ ಬಂದಾಗಲೂ ಅವರು ಇನ್ನಷ್ಟು–ಮತ್ತಷ್ಟು ವಿನೀತರಾಗಿದ್ದಾರೆ. ಸಮಾಜ ವಿಜ್ಞಾನದ ಶಿಕ್ಷಕರಾದ ಅವರು, ಪಠ್ಯಕ್ರಮವನ್ನೂ ರೂಪಿಸಿದವರು. ಶಿಕ್ಷಣ ಮಂಡಳಿಯ ಸದಸ್ಯರಾಗಿ ಮೌಲಿಕ ಸಲಹೆಗಳನ್ನೂ ನೀಡಿದವರು. ಶೈಕ್ಷಣಿಕ ನೆರವಿಗಾಗಿ ಯಾರೇ ಬಂದರೂ ಅವರಿಗೆ ಸಹಾಯಹಸ್ತ ಚಾಚಲು ಸತ್ಯಪ್ರಕಾಶ್ ಅವರ ಮನೆಬಾಗಿಲು ಸದಾ ತೆರೆದಿರುತ್ತದೆ.

ಸತ್ಯಪ್ರಕಾಶ್ ಅವರ ಶಿಷ್ಯಬಳಗ ಜಗದಗಲ ಹರಡಿದೆ. ತಾವು ಧಾರೆ ಎರೆದ ಶಿಕ್ಷಣದ ತೈಲದಿಂದ ಒಂದೊಂದು ದೀಪ ಬೆಳಗಿದಾಗಲೂ ಅವರ ಮುಖ ಖುಷಿಯಿಂದ ಅರಳುತ್ತದೆ. ‘ಸರ್, ನಾನು ನಿಮ್ಮ ಶಿಷ್ಯ’ ಎಂದು ಯಾರೇ ಸಿಕ್ಕು ಕೈಮುಗಿದರೂ ‘ಸಮಾಜಕ್ಕೆ ಸಾಧ್ಯವಾದಷ್ಟು ಬೆಳಕಾಗು ಕಣಪ್ಪ’ ಎಂದು ಎದೆ ತುಂಬಿ ಹರಸುತ್ತಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65